<u>ಅಸಲು ದಾವಾ ಸಂಖ್ಯೆ **-05/2023**</u> ಪಿ.ಡಬ್ಲ್ಯೂ**:-2**

ದಿನಾಂಕಃ **01-07-2025** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು :- ಪ್ರತಿವಾದಿ ಪರ ವಕೀಲರಿಂದ :-</u>

ವಾದಿ ಮತ್ತು ಪ್ರತಿವಾದಿಗಳು ಗೊತ್ತು. ದಾವಾ ಆಸ್ತಿಯಲ್ಲಿ ಈಗ ಪ್ರತಿವಾದಿಗಳು ಸ್ವಾಧೀನದಲ್ಲಿದ್ದಾರೆ. ದಾವಾ ಆಸ್ತಿಯನ್ನು ಯಲ್ಲಮ್ಮರವರು ಖರೀದಿ ಮಾಡಿರುವ ಬಗ್ಗೆ ಕ್ರಯ ಪತ್ರವನ್ನು ನೋಡಿರುತ್ತೇನೆ. ಆದರೆ ನಾನು ಅದಕ್ಕೆ ಸಾಕ್ಷಿದಾರನಾಗಿ ಸಹಿ ಮಾಡಿರುವುದಿಲ್ಲ. ಯಲ್ಲಮ್ಮನಿಗೆ ವಾದಿ ಮತ್ತು ಪ್ರತಿವಾದಿಗಳು ಸಂಬಂಧಿಕರು ಎಂದರೆ ಸರಿ. ನನ್ನ ಮತ್ತು 2 ನೇ ಪ್ರತಿವಾದಿಯ ನಡುವೆ ಬೇರೊಂದು ಜಾಗದ ವಿಚಾರದಲ್ಲಿ ಮನಸ್ತಾಪ ಇದೆ ಎಂದರೆ ಸರಿಯಲ್ಲ. ನನ್ನ ಮತ್ತು 2 ನೇ ಪ್ರತಿವಾದಿಯ ನಡುವೆ ಇರುವ ದ್ವೇಷವನ್ನು ಇಟ್ಟುಕೊಂಡು ವಾದಿಯ ಮೂಲಕ ಪ್ರತಿವಾದಿಗಳಿಗೆ ತೊಂದರೆಯನ್ನು ಕೊಡಲು ಸುಳ್ಳು ದಾವೆಯನ್ನು ಸಲ್ಲಿಸಲು ಪ್ರೇರೇಪಿಸಿದ್ದೇನೆ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ನಮೂದಾಗಿರುವ ವಿಚಾರಗಳು ಶುದ್ಧ ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ. ಪ್ರತಿವಾದಿಗಳ ಮೇಲಿನ ದ್ವೇಷದಿಂದ ಅವರಿಗೆ ತೊಂದರೆಯನ್ನು ಕೊಡಲು ವಾದಿಯ ಪರವಾಗಿ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ:- ಇಲ್ಲ

ಸಾ. ಹೇ. ತೆ. ನ್ಯಾ. ಬೆ. ಮಾಡಿಸಲಾಯಿತು.

ಓ. ಹೇ. ಕೇ. ಸ. ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊನ್ನಾಳಿ.